# ಬಸವಣ್ಣನವರ ವಚನಗಳಲ್ಲಿ ಆಧುನಿಕ ಚಿಂತನೆಗಳ ಪ್ರತಿನಿಧೀಕರಣದ ಅನುಸಂಧಾನಗಳು


## ಅನಿತಾ ಕೆ. ಗುಡಿ

ಸಹಾಯಕ ಪ್ರಾಧ್ಯಾಪಕರು, ಡಾ. ಆರ್.ಸಿ. ಹಿರೇಮಠ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.


DOI: https://doi.org/10.5281/zenodo.15795530


## ABSTRACT:

ಹನ್ನೆರಡನೆಯ ಶತಮಾನ ಎಂದಾಕ್ಷಣ ನಮಗೆಲ್ಲ ಮೈತುಂಬಿಕೊಳ್ಳುವುದು: ಕಲ್ಯಾಣ ಪಟ್ಟಣ. ಬಾಗೇವಾಡಿಯಿಂದ ಕೂಡಲಸಂಗಮ, ಕೂಡಲಸಂಗಮದಿಂದ ಕಲ್ಯಾಣ, ಕಲ್ಯಾಣ ರಾಜ್ಯದ ರಾಜ ಬಿಜ್ಜಳ, ಬಿಜ್ಜಳನ ರಾಜಧಾನಿ ಕಲ್ಯಾಣ ಪಟ್ಟಣ, ಬಸವಣ್ಣನವರು ಕಲ್ಯಾಣ ಬೊಕ್ಕಸದ ಭಂಡಾರಿಯಾಗಿ, ಮಹಾಮಂತ್ರಿಗಳಾಗಿ ಕಲ್ಯಾಣದ ಕೀರ್ತಿಯನ್ನು ಲೋಕದ ಇತಿಹಾಸದಲ್ಲಿ ಬೆಳಗಿ, ನಾಡಿನ ನಾನಾ ಭಾಗಗಳಿಂದ ಸಾಧಕರನ್ನು ಬರಮಾಡಿಕೊಂಡು, ವರ್ಗ, ವರ್ಣ, ಲಿಂಗಭೇದ ರಹಿತ ಶರಣ ಸಮಾಜ ನಿರ್ಮಾಣ ಮಾಡಿದ್ದು, ಬಸವಣ್ಣನವರ ವೈಚಾರಿಕತೆ ಒಪ್ಪದ ಸನಾತನಿಗಳು ರಾಜಶಕ್ತಿಯ ಬಲದಿಂದ ಶರಣರಿಗೆ ಮರಣದಂಡನೆ, ಬಿಜ್ಜಳ ರಾಜನ ಕೊಲೆ, ಕಲ್ಯಾಣ ಕ್ರಾಂತಿ, ಬಸವಣ್ಣನವರ ಸುತ್ತಲೂ ಕಟ್ಟಿ ನಿಂತ ಅನಂತ ಸಾಧಕ ಶರಣರು ಇವೆಲ್ಲವೂ ನಡೆದದ್ದು ಏಕಕಾಲದಲ್ಲಿ. ಬಸವಯುಗವನ್ನು ಎಷ್ಟು ಸಲ ಯಾವ ಮಗ್ಗಲಿನಿಂದಲೂ ಓದಿದರೂ, ಕೇಳಿದರೂ, ಹಾಡಿದರೂ, ತೃಪ್ತಿಯಾಗುವುದಿಲ್ಲ. ಮತ್ತೆ ಮತ್ತೆ ಓದಬೇಕು, ನೋಡಬೇಕು, ಕೇಳಬೇಕು ಬಸವಯುಗದ ಚರಿತ್ರೆಯನ್ನು ಅನ್ನಿಸುವುದು. ಅಷ್ಟೊಂದು ರೋಮಾಂಚನದ ಐತಿಹಾಸಿಕ ಯುಗ ಬಸವಯುಗ.

ಬಾಗೇವಾಡಿಯಿಂದ ಬಸವಣ್ಣನವರ ಬಾಲ್ಯಜೀವನ, ಕೂಡಲಸಂಗಮದಲ್ಲಿ ಸಾಧಕ ಜೀವನ, ಕಲ್ಯಾಣದಲ್ಲಿ ಭಕ್ತಿ ಜೀವನ. ಈ ಮೂರು ಹಂತಗಳಲ್ಲಿ ವರ್ಗ ವ್ಯವಸ್ಥೆ, ಲಿಂಗ ವ್ಯವಸ್ಥೆ, ಪದಾರ್ಥಮಯ ವ್ಯವಸ್ಥೆಯಲ್ಲಿ ಸಮಾಜ ಕಂಡ ಬಸವಣ್ಣನವರು ಭವಿಗಳನ್ನು ಭಕ್ತರನ್ನಾಗಿ, ಅಂಗವ್ಯಸನಿಗಳನ್ನು ಲಿಂಗವ್ಯಸನಿಗಳನ್ನಾಗಿ, ಪದಾರ್ಥವನ್ನು ಪ್ರಸಾದವನ್ನಾಗಿ ಮಾಡಿದವರು. ಜಗತ್ತಿನ ಪ್ರಥಮ ಜನತಾ ಪಾರ್ಲಿಮೆಂಟ್ ಅನುಭವ ಮಂಟಪ ಸ್ಥಾಪಿಸಿ ಅರಮನೆ, ಗುರುಮನೆಯಲ್ಲಿ ಬಂಧಿಸಿದ್ದ ಜ್ಞಾನವನ್ನು ಸಾಮಾನ್ಯರಿಗೆ ದೊರಕುವಂತೆ ಮಾಡಿದವರು ಬಸವಣ್ಣನವರು. ಅದಕ್ಕಾಗಿಯೇ ಬಸವಣ್ಣನವರು ಸಮಾಜದ ಸಮಾನತೆಗಾಗಿ ಮನತುಂಬಿ ಹಾಡಿದ್ದಾರೆ. ಬಸವಣ್ಣನವರ ವಚನಗಳಲ್ಲಿ ಆಧುನಿಕ ಚಿಂತನೆಗಳ ಪ್ರತಿನಿಧೀಕರಣದ ಅನುಸಂಧಾನಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

**KEYWORDS:**

ಬಸವಣ್ಣ, ಕಾಯಕ, ಅನುಭವ ಮಂಟಪ, ಕಲ್ಯಾಣ, ಬಸವಯುಗ, ವೈಚಾರಿಕತೆ.

ಹನ್ನೆರಡನೆಯ ಶತಮಾನ ಎಂದಾಕ್ಷಣ ನಮಗೆಲ್ಲ ಮೈತುಂಬಿಕೊಳ್ಳುವುದು. ಕಲ್ಯಾಣ ಪಟ್ಟಣ, ಬಾಗೇವಾಡಿಯಿಂದ ಕೂಡಲಸಂಗಮ, ಕೂಡಲಸಂಗಮದಿಂದ ಕಲ್ಯಾಣ, ಕಲ್ಯಾಣ ರಾಜ್ಯದ ರಾಜ ಬಿಜ್ಜಳ, ಬಿಜ್ಜಳನ ರಾಜಧಾನಿ ಕಲ್ಯಾಣ ಪಟ್ಟಣ, ಬಸವಣ್ಣನವರು ಕಲ್ಯಾಣ ಬೊಕ್ಕಸದ ಭಂಡಾರಿಯಾಗಿ, ಮಹಾಮಂತ್ರಿಗಳಾಗಿ ಕಲ್ಯಾಣದ ಕೀರ್ತಿಯನ್ನು ಲೋಕದ ಇತಿಹಾಸದಲ್ಲಿ ಬೆಳಗಿ, ನಾಡಿನ ನಾನಾ ಭಾಗಗಳಿಂದ ಸಾಧಕರನ್ನು ಬರಮಾಡಿಕೊಂಡು, ವರ್ಗ, ವರ್ಣ, ಲಿಂಗಭೇದ ರಹಿತ ಶರಣ ಸಮಾಜ ನಿರ್ಮಾಣ ಮಾಡಿದ್ದು, ಬಸವಣ್ಣನವರ ವೈಚಾರಿಕತೆ ಒಪ್ಪದ ಸನಾತನಿಗಳು ರಾಜಶಕ್ತಿಯ ಬಲದಿಂದ ಶರಣರಿಗೆ ಮರಣದಂಡನೆ, ಬಿಜ್ಜಳ ರಾಜನ ಕೊಲೆ, ಕಲ್ಯಾಣ ಕ್ರಾಂತಿ, ಬಸವಣ್ಣನವರ ಸುತ್ತಲೂ ಕಟ್ಟಿ ನಿಂತ ಅನಂತ ಸಾಧಕ ಶರಣರು ಇವೆಲ್ಲವೂ ನಡೆದದ್ದು ಏಕಕಾಲದಲ್ಲಿ. ಬಸವಯುಗವನ್ನು ಎಷ್ಟು ಸಲ ಯಾವ ಮಗ್ಗಲಿನಿಂದಲೂ ಓದಿದರೂ, ಕೇಳಿದರೂ, ಹಾಡಿದರೂ, ತೃಪ್ತಿಯಾಗುವುದಿಲ್ಲ. ಮತ್ತೆ ಮತ್ತೆ ಓದಬೇಕು, ನೋಡಬೇಕು, ಕೇಳಬೇಕು ಬಸವಯುಗದ ಚರಿತ್ರೆಯನ್ನು ಅನ್ನಿಸುವುದು. ಅಷ್ಟೊಂದು ರೋಮಾಂಚನದ ಐತಿಹಾಸಿಕ ಯುಗ ಬಸವಯುಗ.

ಶೂನ್ಯ ಸಂಪಾದನೆಯಲ್ಲಿ ಬರುವ ಕಲ್ಯಾಣ ಪಟ್ಟಣದ ವರ್ಣನೆಯನ್ನು ನೋಡಿದರೆ ಬಸವಣ್ಣನವರಲ್ಲಿ ಎಂಥ ಅಗಾಧವಾದ ಶಕ್ತಿ ಇತ್ತು ಎನ್ನಿಸುವುದು. “ಕಲ್ಯಾಣವೆಂಬ ಪ್ರಣತಿಯಲ್ಲಿ ಬಸವಣ್ಣನೆಂಬ ಜ್ಯೋತಿ ಮುಟ್ಟಿಸಲು ತೊಳಗಿ ಬೆಳಗುತ್ತಿದ್ದುದಯ್ಯ ಶಿವನ ಪ್ರಕಾಶ” ಎಂದು ಅಲ್ಲಮಪ್ರಭುದೇವರು ತಮ್ಮ ವಚನದಲ್ಲಿ ಬಸವಣ್ಣನವರ ಪೂರ್ಣ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯ ರೂಪದಲ್ಲಿ ಈ ವಚನದಲ್ಲಿ ಮನತುಂಬಿ ಮನಸ್ಸಾರೆ ಹಾಡಿದ್ದಾರೆ. ಬಸವಣ್ಣನವರು ಕಲ್ಯಾಣದಲ್ಲಿ 770 ಅಮರಗಣಗಳನ್ನು ಹುಟ್ಟುಹಾಕುವುದರೊಂದಿಗೆ 770 ಕಾಯಕಗಳನ್ನೇ ಹುಟ್ಟುಹಾಕಿದರು. “ಸ್ವರ್ಗಲೋಕ, ಮರ್ತ್ಯಲೋಕ ಬೇರಿಲ್ಲ ಕಾಣಿಭೊ, ಮರ್ತ್ಯಲೋಕದಲ್ಲಿ ಕರ್ತಾರನ ಕಮ್ಮಟವ ರಚಿಸಿ 770 ಅಮರಗಣಗಳಿಗೆ ಕಾಯಕದ ದಾರಿ ತೋರಿದವರು ಬಸವಣ್ಣನವರು.”

ಬಸವಣ್ಣನವರ ಕಮ್ಮಟದಲ್ಲಿ ಇದ್ದವರೆಲ್ಲ ಶರಣರು, ಕಾಯಕ ಗುರುಲಿಂಗ ಜಂಗಮಕ್ಕೆ ತಲೆಬಾಗಿದವರು. ಸಾವು ಬಂದರೂ ಕಾಯಕ ಮುಗಿಸಿಯೇ ತೆರಳಿದ್ದನ್ನು ನೋಡಿದರೆ ಶರಣರ ಮೇಲೆ ಮಹಾನುಭಾವಿ ಬಸವಣ್ಣನವರು ಎಷ್ಟೊಂದು ಪ್ರಭಾವ

ಬೀರಿದ್ದರೆಂದು ತಿಳಿದುಬರುವುದು. ಹನ್ನೆರಡನೆಯ ಶತಮಾನ ಮಹಿಳೆಯರ ಪಾಲಿಗೆ ಸುವರ್ಣಯುಗ. ಮಹಿಳೆಯರ ವ್ಯಕ್ತಿತ್ವ ವಿಕಾಸ ಮತ್ತು ಆತ್ಮವಿಶ್ವಾಸಕ್ಕೆ, ಆತ್ಮೋನ್ನತಿಗೆ ಏರಲು ಅವಕಾಶ ಕಲ್ಪಿಸಿದವರು ಬಸವಣ್ಣನವರು. ಭಾರತದ ಆತ್ಮವನ್ನು ಬಸವಣ್ಣನವರು ಅರಿತಿದ್ದರು. ಆದ್ದರಿಂದಲೇ ಇಡೀ ಜಗತ್ತನ್ನು ವ್ಯವಸ್ಥೆ ಮಾಡುವ ಜವಾಬ್ದಾರಿಯನ್ನು ಹೊತ್ತರು. ಲಕ್ಷದ ಮೇಲೆ ತೊಂಭತ್ತಾರು ಸಾವಿರ ವಚನ ಮಾಡಿ ಹಾಡಿದ ಬಸವಣ್ಣನವರಿಗೆ ಜಂಗಮರೇ ಪ್ರಾಣವಾಗಿದ್ದರು. ಬಾಗೇವಾಡಿಯಿಂದ ಬಸವಣ್ಣನವರ ಬಾಲ್ಯಜೀವನ, ಕೂಡಲಸಂಗಮದಲ್ಲಿ ಸಾಧಕ ಜೀವನ, ಕಲ್ಯಾಣದಲ್ಲಿ ಭಕ್ತಿ ಜೀವನ. ಈ ಮೂರು ಹಂತಗಳಲ್ಲಿ ವರ್ಗ ವ್ಯವಸ್ಥೆ, ಲಿಂಗ ವ್ಯವಸ್ಥೆ, ಪದಾರ್ಥಮಯ ವ್ಯವಸ್ಥೆಯಲ್ಲಿ ಸಮಾಜ ಕಂಡ ಬಸವಣ್ಣನವರು ಭವಿಗಳನ್ನು ಭಕ್ತರನ್ನಾಗಿ, ಅಂಗವ್ಯಸನಿಗಳನ್ನು ಲಿಂಗವ್ಯಸನಿಗಳನ್ನಾಗಿ, ಪದಾರ್ಥವನ್ನು ಪ್ರಸಾದವನ್ನಾಗಿ ಮಾಡಿದವರು. ಜಗತ್ತಿನ ಪ್ರಥಮ ಜನತಾ ಪಾರ್ಲಿಮೆಂಟ್ ಅನುಭವ ಮಂಟಪ ಸ್ಥಾಪಿಸಿ ಅರಮನೆ, ಗುರುಮನೆಯಲ್ಲಿ ಬಂಧಿಸಿದ್ದ ಜ್ಞಾನವನ್ನು ಸಾಮಾನ್ಯರಿಗೆ ದೊರಕುವಂತೆ ಮಾಡಿದವರು ಬಸವಣ್ಣನವರು. ಅದಕ್ಕಾಗಿಯೇ ಬಸವಣ್ಣನವರು ಸಮಾಜದ ಸಮಾನತೆಗಾಗಿ ಮನತುಂಬಿ ಹಾಡಿದ್ದಾರೆ.

**ಅಪ್ಪನು ನಮ್ಮ ಮಾದಾರ ಚೆನ್ನಯ್ಯ**
**ಬೊಪ್ಪನು ನಮ್ಮ ಡೊಹರ ಕಕ್ಕಯ್ಯ**
**ಚಿಕ್ಕಯ್ಯ ನೆಮ್ಮಯ್ಯ ಕಾಣಯ್ಯ**
**ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ**
**ಎನ್ನನೇತಕ್ಕರಿಯರಿ ಕೂಡಲಸಂಗಯ್ಯ**

ಬಸವಣ್ಣನವರು ಭಾರತಕ್ಕೆ ಅಂಟಿದ ಸೂತಕದಂತಿದ್ದ ಜಾತಿಯ ವ್ಯವಸ್ಥೆಯನ್ನು ಛಿದ್ರಗೊಳಿಸಲು ವೀರಶೈವ ಧರ್ಮದ ಲಾಂಛನವನ್ನಾಗಿ ಇಷ್ಟಲಿಂಗವನ್ನು ತರುವಲ್ಲಿ ಸಮಾನತೆಯ ಪರಿಕಲ್ಪನೆಯನ್ನು ಸಮಾಜದ ಮುಂದಿಟ್ಟು ವ್ಯಕ್ತಿಯನ್ನು ವಿಶ್ವಮಾನವನನ್ನಾಗಿ ಪರಿವರ್ತಿಸುವ ಪ್ರಯತ್ನವನ್ನು ಮಾಡಿದರು. ಬಹಳ ದೊಡ್ಡ ಸಾಮಾಜಿಕ ಸಮಾನತೆಯ ಕ್ರಾಂತಿಯನ್ನು ಮೊಟ್ಟಮೊದಲು ಮಾಡುವ ಮೂಲಕ ‘‘ಲೇಸೆನಿಸಿಕೊಂಡು ಐದು ದಿನ ಬದುಕಿದಡೇನು? ಕೂಡಲಸಂಗನ ಶರಣರ ವಚನದಲ್ಲಿ ಲೇಸೆನಿಸಿಕೊಂಡು ಒಂದು ದಿವಸ ಬದುಕಿದಡೇನೊ’’ ಎಂದು ಬಸವಣ್ಣನವರು ವಚನದಲ್ಲಿ ಬದುಕಿನ ಸಾರ್ಥಕತೆಯನ್ನು ಎತ್ತಿಹಿಡಿದಿದ್ದಾರೆ. ಬಸವಣ್ಣನವರು ಒಂದು ರಾಜ್ಯದ ಪ್ರಧಾನಿಯಾಗಿದ್ದರೂ ರಾಜಕೀಯದ ಜೊತೆಗೆ ಸಾಮಾಜಿಕ ಹೊಣೆಗಾರಿಕೆ ಹೊತ್ತು ಕಲ್ಯಾಣವನ್ನು ಕೈಲಾಸವನ್ನಾಗಿ ಮಾಡಿದ ಕೀರ್ತಿ ಅವರಿಗೆ ಸಲ್ಲುವುದು. ಅದಕ್ಕಾಗಿ ಬಸವಣ್ಣನವರನ್ನು ಸೊನ್ನಲಿಗೆ ಸಿದ್ಧರಾಮ ತನ್ನ ವಚನದಲ್ಲಿ ಹೀಗೆ ಹೇಳಿದ್ದಾನೆ:

**“ಅಲ್ಲಮನ ಲಕ್ಷ್ಯ ವೈರಾಗ್ಯದಲ್ಲಿ**
**ಚೆನ್ನಬಸವಣ್ಣನ ಲಕ್ಷ್ಯ ಕ್ರಿಯಾಜ್ಞಾನದಲ್ಲಿ**
**ಬಸವಣ್ಣನ ಲಕ್ಷ್ಯ ಭಕ್ತಿಯಲ್ಲಿ**
**ಮಡಿವಾಳಯ್ಯನ ಲಕ್ಷ್ಯ ಅಹಂಕಾರ ನಾಶದಲ್ಲಿ**
**ಸಕಳೇಶಯ್ಯನ ಲಕ್ಷ್ಯ ಸಮತೆಯಲ್ಲಿ**
**ಶಿವಯೋಗಿಯ ಸಿದ್ಧರಾಮನೆಂಬ ಬಾಲಕನ ಲಕ್ಷ್ಯ**
**ಲಿಂಗಪೂಜೆಯಲ್ಲಿ ನೋಡಾ**
**ಕಪಿಲಸಿದ್ಧ ಮಲ್ಲಿಕಾರ್ಜುನ”[1]**

ಸಿದ್ಧರಾಮನಿಗೆ ಬಸವಣ್ಣನವರನ್ನು ಎಷ್ಟು ಕೊಂಡಾಡಿದರೂ ಮುಗಿಯದು. ಭಕ್ತನಾದವನು ಹೇಗಿರಬೇಕೆಂದು ಬಸವಣ್ಣನವರ ಕುರಿತು:

**“ಭಕ್ತನಾದಡೆ ಬಸವಣ್ಣನಂತಾಗಬೇಕು**
**ಜಂಗಮವಾದಡೆ ಪ್ರಭುವಿನಂತಾಗಬೇಕು**
**ಭೋಗಿಯಾದಡೆ ನಮ್ಮ ಗುರು ಚೆನ್ನಬಸವಣ್ಣನಂತಾಗಬೇಕು**
**ಯೋಗಿಯಾದಡೆ ನನ್ನಂತಾಗಬೇಕು ನೋಡಯ್ಯಾ**
**ಕಪಿಲಸಿದ್ಧ ಮಲ್ಲಿಕಾರ್ಜುನ.”[2]**

ಅಲ್ಲಮಪ್ರಭುದೇವರು “ಬಸವಣ್ಣನವರ ಕುರಿತು ಭಕ್ತಿ ಎಂಬ ಸಮಾಧಾನ ಬಸವಣ್ಣನಿಂದ ಎನಗಾಯಿತು” ಎಂದರೆ, “ಬಸವಣ್ಣನ ಮನೆಯ ಮಗಳಾಗಿ ಬದುಕಿದೆನಾಗಿ ತನ್ನ ಕರುಣ ಭಕ್ತಿ ಪ್ರಸಾದವ ಕೊಟ್ಟನು” ಎಂದು ಅಕ್ಕಮಹಾದೇವಿ ಬಸವಣ್ಣ ತನ್ನನ್ನು ರಕ್ಷಿಸಿದ ಕಾರಣ ಚೆನ್ನಮಲ್ಲಿಕಾರ್ಜುನನ ಪಾದಕ್ಕೆ ಯೋಗ್ಯಳಾದೆನು ಎಂದು ಧನ್ಯತೆಯನ್ನು ವ್ಯಕ್ತಪಡಿಸಿದ್ದಾಳೆ. ಬಯಲನೆ ಬಿತ್ತಿ, ಬಯಲನೆ ಬೆಳೆದು ಬಯಲಾದ ಅಲ್ಲಮಪ್ರಭುಗಳು ಬಸವಣ್ಣನವರ ವ್ಯಕ್ತಿತ್ವವನ್ನು ಕುರಿತು ಕೆಳಗಿನ ವಚನದಲ್ಲಿ ಸಮಾಜಕ್ಕೆ ಕನ್ನಡಿಯ ರೂಪದಲ್ಲಿ ಹಿಡಿದಿದ್ದಾರೆ:

**“ಕಲ್ಯಾಣವೆಂಬ ಪ್ರಣತೆಯಲ್ಲಿ**
**ಭಕ್ತಿರಸವೆಂಬ ತೈಲವನೆರೆದು**
**ಆಚಾರವೆಂಬ ಭಕ್ತಿಯಲ್ಲಿ**
**ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು**
**ತೊಳಗಿ ಬೆಳಗುತ್ತಿದ್ದತ್ತಯ್ಯಾ ಶಿವನ ಪ್ರಕಾಶ!**
**ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯಾ ಅಸಂಖ್ಯಾತ ಭಕ್ತಗಣಗಳು**
**ಶಿವಭಕ್ತರಿದ್ದ ಕ್ಷೇತ್ರವೆ ಭವಿಮುಕ್ತ ಕ್ಷೇತ್ರವೆಂಬುದು ಹುಸಿಯೇ?**
**ಶಿವಭಕ್ತರಿದ್ದ ದೇಶವೆ ಪಾವನವೆಂಬುದ ಹುಸಿಯೇ?**
**ಗುಹೇಶ್ವರ ಲಿಂಗದಲ್ಲಿ ಎನ್ನ ಪರಮಾರಾಧ್ಯ**
**ಸಂಗನ ಬಸವಣ್ಣನ ಕಂಡು ಬದುಕಿದೆನು ಕಾಣಾ ಸಿದ್ಧರಾಮಯ್ಯ”**

ಎಂದು ಅಲ್ಲಮಪ್ರಭುಗಳು ಬಸವಣ್ಣನವರನ್ನು ಯುಗದ ಉತ್ಸಾಹವಾಗಿದ್ದರು,

ಉನ್ನತ ಪ್ರಜ್ಞೆಯ ಪ್ರತೀಕವಾಗಿದ್ದರು ಎಂದು ತಮ್ಮ ವಚನಗಳಲ್ಲಿ ಬಸವಣ್ಣನವರ ಕುರಿತು ಮನಬಿಚ್ಚಿ ಹೇಳಿಕೊಂಡಿದ್ದಾರೆ. ಏಕಕಾಲದಲ್ಲಿ ಏಕದೇವೋಪಾಸನೆ, ರಾಜಪರಂಪರೆ, ಪ್ರಭುಸಂಸ್ಕೃತಿ, ಗಳಿಕೆಯ ಸಂಸ್ಕೃತಿ, ಯಜಮಾನ ಸಂಸ್ಕೃತಿಯನ್ನು ಕಸವರವನ್ನು ಕಸಕ್ಕಿಂತ ಕಡೆಯಾಗಿ ಕಡೆಗಣಿಸಿ, ಕಾಯಕಕ್ಕೆ ಮಹತ್ವ ನೀಡಿ, ಪ್ರಭುತ್ವದ ಆಡಳಿತದಲ್ಲಿ ಪ್ರಜಾಪ್ರಭುತ್ವದ ಆಡಳಿತಕ್ಕೆ ಅನುಭವ ಮಂಟಪ ಸ್ಥಾಪಿಸಿ ಎಲ್ಲ ವರ್ಗದ ಪ್ರಜೆಗಳಿಗೆ ಕಾಯಕಗಳು ಇಲ್ಲಿಂದಲೇ ಪ್ರಾರಂಭಗೊಂಡು, ಕನಿಷ್ಠ ಕಾಯಕಗಳು ಎಂದು ಕರೆಯಿಸಿಕೊಂಡ ಕಾಯಕಗಳೆಲ್ಲ ಶ್ರೇಷ್ಠ ಎನಿಸಿ ಶಿವಮಯ ಕಾಯಕಗಳಾದದ್ದು ಬಸವಣ್ಣನವರಿಂದ. ಹಸಿವಿನಿಂದ ಸಮಾಜವನ್ನು ಮುಕ್ತವಾಗಿಸಲು ಸಮಾನತೆಯ ಸಹಭೋಜನಕ್ಕೆ ಮಹಾಮನೆಯನ್ನು ಸ್ಥಾಪಿಸಿದರು. ಕೆಳವರ್ಗದವರು, ದಲಿತರು, ಸ್ತ್ರೀಯರು, ಕಾಯಕ ದಾಸೋಹದೊಂದಿಗೆ ಸಮಾಜದಲ್ಲಿ ನೆಲೆಸಿದ್ದ ಪ್ರಭುವರ್ಗ, ಪುರೋಹಿತ ವರ್ಗ, ಪುರುಷ ವರ್ಗ ಸ್ಥಾವರತೆ ಕುರಿತು ಅನುಭವ ಮಂಟಪದಲ್ಲಿ ಗಂಭೀರ ಚರ್ಚೆಗಳನ್ನು ನಡೆಸುತ್ತಿದ್ದರು. ಈ ಚರ್ಚೆಗೆ, ವಾದವಿವಾದಗಳಿಗೆ ಅಂತಿಮ ಸುಪ್ರೀಂ ತೀರ್ಪುಗಾರರನ್ನಾಗಿ ನ್ಯಾಯಮೂರ್ತಿಗಳು, ವೈರಾಗ್ಯಮೂರ್ತಿ ಅಲ್ಲಮಪ್ರಭುದೇವರನ್ನು ಶೂನ್ಯಸಿಂಹಾಸನ ಪೀಠದ ಅಧ್ಯಕ್ಷರನ್ನಾಗಿ ಮಾಡಿ ಇಡೀ ಸಮಾಜವನ್ನು ಜಂಗಮವನ್ನಾಗಿ ಮಾಡಿದ ಕೀರ್ತಿ ಬಸವಣ್ಣನವರಿಗೆ ಸಲ್ಲುವುದು.

"ಹುಸಿ ಹಣ್ಣಾಗಿ ತೊಟ್ಟು ಬಿಟ್ಟಿತ್ತು ಅರಸನಲ್ಲಿ"."ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ" ಎಂದು ಪ್ರಶ್ನಿಸುವ ಸ್ತ್ರೀಯರಿಗೆ ಮಾತನಾಡುವ ಕ್ರಿಯಾಶೀಲತೆಯನ್ನು ನೀಡಿದವರು ಬಸವಣ್ಣನವರು. "ಸಮಾಜದ ಅಂತ್ಯಜರಿಗೆ ವ್ಯಕ್ತಿ ಗೌರವವನ್ನು ನೀಡಿದವರು ಬಸವಣ್ಣನವರು." ದಲಿತ ವರ್ಗದ ಸ್ತ್ರೀಯರು ವಚನ ರಚನೆ, ಅದೂ ಆ ಕಾಲದಲ್ಲಿ ವಚನ ಸಾಹಿತ್ಯ ರಚನೆ ಮಾಡಿ ರಾಜಶಕ್ತಿಯನ್ನು ಪ್ರಶ್ನಿಸಿ, ವಿಡಂಬಿಸಿ, ವಿಮರ್ಶೆ ಮಾಡುವ ಬಹುದೊಡ್ಡ ಶಕ್ತಿಯನ್ನು ತುಂಬಿದವರು ಬಸವಣ್ಣನವರು. ಆದ್ದರಿಂದಲೇ 'ಬಾಗೇವಾಡಿ' ಬಸವನ ಬಾಗೇವಾಡಿಯಾಯಿತು. 'ಕಲ್ಯಾಣ' ಬಸವಕಲ್ಯಾಣವಾಯಿತು. ಬಸವನ ಅನುಭಾವದಿಂದ ಬಸವಣ್ಣನವರು ಪ್ರಪ್ರಥಮ ಸಾಮಾಜಿಕ ಸಂಘರ್ಷದಿಂದ ಕ್ರಾಂತಿಯ ನಾಯಕರು. ಹನ್ನೆರಡನೆಯ ಶತಮಾನದ ಕಲ್ಯಾಣ ಕ್ರಾಂತಿಯ ಕೇಂದ್ರ ಬಿಂದು ಬಸವಣ್ಣ. ಮಧುವರಸರು ಮತ್ತು ಹರಳಯ್ಯಗಳ ಮಕ್ಕಳ ಮದುವೆಯ ಮೂಲಕ ಬ್ರಾಹ್ಮಣ-ಶೂದ್ರರ ರಕ್ತ ಸೇತುವೆಯಾಗಿ ಹರಡಿದ್ದು, ಜಗತ್ತಿನಲ್ಲಿಯೇ ಪ್ರಪ್ರಥಮವಾಗಿ ಘಟಿಸಿದ ಅಂತರಜಾತಿಯ ವಿವಾಹ ಇದು. ಇದರ ಹೊಣೆ ಹೊತ್ತವರು ಬಸವಣ್ಣನವರೇ. ಬಸವಣ್ಣನವರು ಬರೀ ಕಲ್ಯಾಣದ ಬಸವಣ್ಣನಲ್ಲ, ಲೋಕ ಕುಟುಂಬದ ಸದಸ್ಯರಾಗಿದ್ದರು. ಸಮಾಜದಲ್ಲಿ ಹೆಣವಾಗಿ ಬಿದ್ದಿದ್ದ ಸಂಸಾರಕ್ಕೆ ಜೀವವೆನ್ನುವ ಪ್ರಸಾದದ ಮೌಲ್ಯವನ್ನು ಕರುಣಿಸಿದ ಮಹಾನುಭಾವರು.

"ಕಾಯ, ಕಾಯಕ" ಮಾಡಿಯೇ ಬದುಕಬೇಕು, ಗುರುವಾದರೂ ಕೂಡ ಎಂದು ಕಾಯಕ ಸಿದ್ಧಾಂತವನ್ನು ಸಮಾಜದಲ್ಲಿ ಅನಾವರಣಗೊಳಿಸಿದರು. ಜಾಗತೀಕರಣದ ಕತ್ತಲಲ್ಲಿ ಭಾರತೀಯ ಶ್ರೀಮಂತ ಜಂಗಮಮುಖಿ ಸಂಸ್ಕೃತಿ ಮಂಜಿನಂತೆ ಕರಗಿ ಹೊರಟಿದೆ. ಇಂದಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮಡಿವಂತಿಕೆ ಎಲ್ಲವೂ ಅಧೋಗತಿಗೆ ಇಳಿದಿದೆ. ಆದರೆ ಬಸವಣ್ಣನವರಿಗೆ ಇಡೀ ರಾಜ್ಯದ ಬೊಕ್ಕಸವನ್ನೇ ನೀಡಿದ್ದ ಪ್ರಬಲ ರಾಜ ಬಿಜ್ಜಳ, ಬಸವಣ್ಣನವರಿಗೆ ಎಲ್ಲವನ್ನೂ ನೀಡಿ ಪ್ರತಿ ಕ್ಷಣ ಕ್ಷಣವೂ ಬಸವಣ್ಣನನ್ನು ನೋಡಿ ಒಳಗೊಳಗೆ ಸಂತಸಪಟ್ಟ ಬಿಜ್ಜಳ, ಬಸವಣ್ಣನವರಿಗೆ ವೈಯಕ್ತಿಕವಾಗಿ ಯಾವ ಕೊರತೆ ಮಾಡಿರಲಿಲ್ಲ. ಆದರೆ ಬಸವಣ್ಣನವರಿಗೆ ವ್ಯಕ್ತಿಗಿಂತ ಸಮಷ್ಟಿ ಹಿತ ಕಾಯುವುದೇ ಅವರ ಜೀವನದ ಪರಮ ಗುರಿಯಾಗಿತ್ತು. ಹಾಗಾಗಿಯೇ ಬಸವಣ್ಣನವರು ಹೇಳುತ್ತಾರೆ "ಆರು ಮುನಿದು ನಮ್ಮನೇನು ಮಾಡುವರು" ಎಂದು ಮಾಡಬೇಕಾದ ಜವಾಬ್ದಾರಿಯುತ ಕೆಲಸ ಮಾಡಿ ಮುಗಿಸಿದರು. ಅವರನ್ನು ಎಡಬಿಡದೇ ಕಾಡಿದ ಸಾಮಾಜಿಕ ಸಮಸ್ಯೆಗಳು, ಸಂಘರ್ಷಗಳು, ಜನಮನದಲ್ಲಿ ಬಿಂಬಿಸಿದವು. ಹಾಗಾಗಿಯೇ ವ್ಯಕ್ತಿ ಸಮೂಹ ಅಳಿದು, ಶರಣ ಸಮೂಹ ರೂಪಗೊಂಡು, ಇಡೀ ವಿಶ್ವವೇ ಬಸವಣ್ಣನವರ ವಿಚಾರಗಳಿಗೆ ತಲೆಬಾಗಿ ಕಲ್ಯಾಣದ ಬಾಗಿಲಲ್ಲಿ ಬಾಗಿ ಬಂದು ಪ್ರಭು ಸಂಸ್ಕೃತಿಯನ್ನು ಪ್ರಶ್ನಿಸಿದರು.

ಅದಕ್ಕಾಗಿ ಅಲ್ಲಮಪ್ರಭುದೇವರು ಬಸವಣ್ಣನವರ ಅಪ್ರತಿಮ ಅಗಮ್ಯ ವ್ಯಕ್ತಿತ್ವಕ್ಕೆ ಮಾರುಹೋಗಿ, ತಾವು ನೆಲೆನಿಂತ ಕ್ಷೇತ್ರ ಪವಿತ್ರವಾಯಿತು, ಪಾವನವಾಯಿತು. ಅಜ್ಞಾನವೆಂಬ ಕತ್ತಲಲ್ಲಿ ಬಸವನೆಂಬ ಜ್ಯೋತಿ ಬೆಳಗಿ ಹೊರಗೂ, ಒಳಗೂ ನಾವು ಹಸನಾದೆವು ಎಂದು ಪ್ರಭುದೇವರು ಧನ್ಯತಾ ಭಾವವನ್ನು ವ್ಯಕ್ತಪಡಿಸಿದ್ದಾರೆ. ಕಲ್ಯಾಣದಲ್ಲಿ ಚೆಲ್ಲಿದ ಬಸವಣ್ಣನ ಶಿವಬೆಳಕು ನಾಡೊಳಗೆ ಸೊಲ್ಲೆತ್ತಿ ಬೆಳಗಲು, ಬಸವನಿದ್ದಲ್ಲಿಗೆ, "ಗೌಳ, ಚೋಳ, ಬಂಗಾಳ, ವಂಗ, ಕಳಿಂಗ, ಚೇರ, ಕೇರಳ, ಪಾಂಡ್ಯ, ಮಾಳವ, ಲಾಳ, ಮಹಾರಾಷ್ಟ್ರ, ತುಳುವ, ಮಲಯಾಳ, ತೆಲುಗು, ತಿಗುಳ, ಬರ್ಬರ, ಸಿಂಗಣ(ಶ್ರೀಲಂಕಾ), ಕಾಶ್ಮೀರ, ದೇಶಗಳಿಂದ ಜನ, ಮಹಾಪೂರದಂತೆ ಬರುತ್ತಿತ್ತು ಎನ್ನುತ್ತಾನೆ ಕವಿ ಹರಿಹರ."[3] ಅಫ್ಘಾನಿಸ್ತಾನದಿಂದ ಮರುಳಶಂಕರದೇವರಂಥ ಸೂಫಿಗಳೂ ಆಗಮಿಸಿದ್ದನ್ನು ನೋಡಿದರೇ, ಬಸವಣ್ಣನವರು ಕರ್ನಾಟಕ ನೆಲದಲ್ಲಿ ಹುಟ್ಟಿ ಇಡೀ ಜಗಕ್ಕೆ ನಾಡಿನ ಪಾವಿತ್ರ್ಯತೆಯನ್ನು ಪರಿಚಯಿಸಿದರು.

ಸಾಮಾನ್ಯ ಜನತೆಯ ಬದುಕಿನ ಬೇರಿನಿಂದ ವಚನಗಳು ಮೊಳಕೆಯೊಡೆದು ಚಿಗುರಿದವು. 770 ವಚನಕಾರರಲ್ಲಿ ಪುರುಷರು, ಸ್ತ್ರೀಯರು, ವಿವಿಧ ವೃತ್ತಿಯವರು, ವಿವಿಧ ಸ್ತರದವರು ವಚನ ರಚನೆ ಮಾಡಿದ್ದಾರೆ. ಬಸವಣ್ಣನ ಕರೆಗೆ ಓಗೊಟ್ಟ ಶರಣರ ಕ್ರಾಂತಿ ಕಲ್ಯಾಣದಲ್ಲಿ ಮೊಳಗಿ, ವಿಪ್ಲವದಲ್ಲಿ ಕೊನೆಗೊಂಡಿತು. ಬಸವಣ್ಣನವರ ವ್ಯಕ್ತಿತ್ವ ಮಹಾಬೆಳಗಿನಲ್ಲಿ ಬೆಳಗಿದ ಎಲ್ಲ ಶರಣರು ತಮ್ಮ ವಚನಗಳಲ್ಲಿ ಬಸವಣ್ಣನನ್ನು

ಕೊಂಡಾಡಿದ್ದಾರೆ. ಕಲ್ಯಾಣ ಕ್ರಾಂತಿ ಯಾಕೆ ಆಯಿತು? ಹೇಗಾಯಿತು? ಹೇಗಿತ್ತು ಆ ಕಾಲ ಎಂಬುದನ್ನು ವಚನಕಾರರು ತಮ್ಮ ವಚನಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ವಚನಕಾರರಿಗಿಂತ ವಚನಕಾರ್ತಿಯರು ಬಸವಣ್ಣನವರನ್ನು, ತಾವು ಸಾಧಿಸಿದ ಸಾಧನೆಯ ಆಧ್ಯಾತ್ಮದ ಗುರು ಬಸವನೇ ಎಂದಿದ್ದಾರೆ. ಅಕ್ಕಮಹಾದೇವಿ ಉಡುತಡಿಯಿಂದ ಬಸವಣ್ಣನವರು ಹಮ್ಮಿಕೊಂಡಿದ್ದ ಭಕ್ತಿ ಕಲ್ಯಾಣ ಪಟ್ಟಣವನ್ನು ನೋಡಲೆಂದೇ ಧಾವಿಸಿದಾಗ, ಕಲ್ಯಾಣದಲ್ಲಿಯ ಭಕ್ತಿಯ ಸಾಮ್ರಾಜ್ಯವನ್ನು ಕಂಡು ಭಾವಪರವಶಳಾಗಿ ನಿಲ್ಲುತ್ತಾಳೆ.

**“ಅಯ್ಯಾ ನಿಮ್ಮ ಶರಣರು ಮೆಟ್ಟಿದ ಧರೆ ಪಾವನವಯ್ಯಾ**
**ಅಯ್ಯಾ ಶರಣರಿದ್ದ ಪುರವೇ ಕೈಲಾಸವಯ್ಯಾ**
**ಚೆನ್ನಮಲ್ಲಿಕಾರ್ಜುನನಯ್ಯಾ ನಿಮ್ಮ ಶರಣ ಬಸವನಿದ್ದ**
**ಕ್ಷೇತ್ರ ಅವಿಮುಕ್ತ ಕ್ಷೇತ್ರವಯ್ಯಾ.”**[4]

ಎಂದು ಅಕ್ಕಮಹಾದೇವಿ ಕಲ್ಯಾಣ ಪಟ್ಟಣವನ್ನು ತನ್ನ ವಚನಗಳಲ್ಲಿ ಹೃದಯ ತುಂಬಿ ಹಾಡಿದ್ದಾಳೆ. “ಆನು ಸಂಗನ ಬಸವಣ್ಣನ ಶ್ರೀ ಪಾದಕ್ಕೆ ನಮೋ ನಮೋ ಎನುತಿರ್ದನು” ಎನ್ನುತ್ತಾ ಮುಂದುವರೆದು ಬಸವಣ್ಣನವರ ಮಹಿಮೆಯನ್ನು ಈ ರೀತಿ ಕೊಂಡಾಡಿದ್ದಾಳೆ:

**“ದೇವಲೋಕದವರೆಗೂ ಬಸವಣ್ಣನೆ ದೇವರು**
**ಮರ್ತ್ಯ ಲೋಕದವರೆಗೂ ಬಸವಣ್ಣನೆ ದೇವರು**
**ನಾಗಲೋಕದವರೆಗೂ ಬಸವಣ್ಣನೆ ದೇವರು**
**ಮೇರುಗಿರಿ ಮಂದರಗಿರಿ ಮೊದಲಾದವೆಲ್ಲಕ್ಕೂ ಬಸವಣ್ಣನೆ ದೇವರು**
**ಚೆನ್ನಮಲ್ಲಿಕಾರ್ಜುನಯ್ಯಾ**
**ನಿಮಗೂ ಎನಗೂ ನಿಮ್ಮ ಶರಣರಿಗೂ ಬಸವಣ್ಣನೆ ದೇವರು.”**[5]

ಎಂದು ತಾನೊಲಿದ ಚೆನ್ನಮಲ್ಲಿಕಾರ್ಜುನನಲ್ಲಿ ಬಸವಣ್ಣನನ್ನು ಕೊಂಡಾಡಿದ್ದಾಳೆ. ಇಡೀ ಪ್ರಪಂಚಕ್ಕೆ ವಿಶ್ವಗುರು ಎಂದೇ ಕರೆಸಿಕೊಳ್ಳುತ್ತಿರುವ ವಿಶ್ವಜ್ಯೋತಿ ಬಸವಣ್ಣ, ಭಕ್ತಿಭಂಡಾರಿ ಬಸವಣ್ಣ, ಅಣ್ಣ ಬಸವಣ್ಣನವರ ಅಸಾಧಾರಣ ವ್ಯಕ್ತಿತ್ವವನ್ನು ಬಸವಕಾಲೀನ ಶರಣರೆಲ್ಲರೂ ತಮ್ಮ ವಚನಗಳಲ್ಲಿ ಕೊಂಡಾಡಿದ್ದಾರೆ. ಬಸವೋತ್ತರ ಕಾಲದ ಶರಣರು, ಸಂತರು, ಸಾಹಿತಿಗಳು, ಕವಿಗಳು, ಸಂಶೋಧಕರು, ಬಸವಣ್ಣನವರ ಅಪ್ರತಿಮ ವ್ಯಕ್ತಿತ್ವವನ್ನು ಗುಣಗಾನ ಮಾಡಿದ್ದಾರೆ. ಕನ್ನಡದಲ್ಲಿ ಬಸವಣ್ಣನವರ ಕುರಿತು ರಚಿತವಾದಷ್ಟು ಕೃತಿಗಳು ಬೇರಾವ ವಿಷಯದ ಕುರಿತು ರಚಿತವಾಗಿಲ್ಲ. ಬಸವಣ್ಣನವರು ಎಲ್ಲಾ ಕಾಲಕ್ಕೂ ಬೇಕು. ಬಸವನಿಲ್ಲದ ಸಾಹಿತ್ಯ, ಧರ್ಮ, ಸಂಸ್ಕೃತಿ ಪೂರ್ಣವಾಗದು.

ಬಸವಣ್ಣನವರ ಜೀವನದಲ್ಲಿ ಅಕ್ಕನಾಗಲಾಂಬಿಕೆಯ ಪಾತ್ರ ಬಹಳ ದೊಡ್ಡದು. ಬಸವಣ್ಣನವರ ಬಾಲ್ಯ, ಸಾಧಕ ಜೀವನಕ್ಕೆ ಎದೆಗೊಟ್ಟು ನಿಂತವಳು ಅಕ್ಕನಾಗಲಾಂಬಿಕೆ.

ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವಣ್ಣನವರನ್ನು ಕನ್ನಡ ನಾಡಿಗೆ ನೀಡಿದ ಮಹಾತಾಯಿ ಅಕ್ಕನಾಗಲಾಂಬಿಕೆ. ಭಕ್ತಿಭಂಡಾರಿ ಬಸವಣ್ಣ ಸ್ತ್ರೀಗೆ ಅಂಟಿದ ಶೂದ್ರತನವನ್ನು ನೀಗಿದ್ದನ್ನು ತನ್ನ ವಚನದಲ್ಲಿ ಅಕ್ಕನಾಗಲಾಂಬಿಕೆ ಈ ರೀತಿ ಹೇಳಿದ್ದಾಳೆ:

**"ಎನ್ನ ಕುಲಸೂತಕವ ಕಳೆದಾತ ಬಸವಣ್ಣ**
**ಎನ್ನ ಛಲಸೂತಕವ ಕಳೆದಾತ ಬಸವಣ್ಣ**
**ಎನ್ನ ತನುಸೂತಕವ ಕಳೆದಾತ ಬಸವಣ್ಣ**
**ಎನ್ನ ಮನಸೂತಕವ ಕಳೆದಾತ ಬಸವಣ್ಣ**
**ಎನ್ನ ಭಾವಸೂತಕವ ಕಳೆದಾತ ಬಸವಣ್ಣ**
**..............................**
**ನಿಜದ ನಿರ್ವಯಲ ಬಾಗಿದ ನಿಜವ ತೋರಿದಾತ ಬಸವಣ್ಣ**
**ಬಸವಣ್ಣ ಪ್ರಿಯ ಚೆನ್ನಸಂಗಯ್ಯನ ಹೃದಯ ಕಮಲದಲ್ಲಿ"**[6]

ನಿಜನಿವಾಸಿಯಾಗಿರಿಸಿದ ಬಸವಣ್ಣನನ್ನು ಹಾಡಿ ಹೊಗಳಿದ್ದಾಳೆ.

ಬಸವಣ್ಣನವರ ವಿಶ್ವವ್ಯಾಪಿ ವ್ಯಕ್ತಿತ್ವವನ್ನು ತನ್ನ ವಚನಗಳಲ್ಲಿ ಅಕ್ಕನಾಗಲಾಂಬಿಕೆ ಸ್ಫುಟವಾಗಿ ಒಡಮೂಡಿಸಿದ್ದಾಳೆ. ಬಸವಣ್ಣನವರ ಧರ್ಮಪತ್ನಿಯರು ಆಚಾರ ಪತ್ನಿ ಗಂಗಾಂಬಿಕೆ, ವಿಚಾರ ಪತ್ನಿ ನೀಲಾಂಬಿಕೆಯರು ಬಸವನ ಅನುಭಾವದಿಂದ ವಿವರ ಕಂಡು ವಿಚಾರ ಪತ್ನಿಯಾದೆನಯ್ಯ ಸಂಗಯ್ಯ ಎಂದು ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿ ತನ್ನ ಲೌಕಿಕ ಬದುಕನ್ನು ಆಧ್ಯಾತ್ಮಕ್ಕೇರಿಸಿದ ಪ್ರಸಂಗಕ್ಕೆ ಬಸವನೇ ಕಾರಣಿಪುರುಷನೆಂದು ತನ್ನ ಇಹಪರದ ನಾಯಕ ಬಸವನೇ ಆಗಿದ್ದನು ಎಂದು ಬಸವನ ಹಿರಿಮೆಯ ಬದುಕು ಅರಿತು ನಡೆಯುವಂತೆ ಮಾಡಿತೆಂದು ನೀಲಾಂಬಿಕೆ ತನ್ನ ವಚನಗಳಲ್ಲಿ ಹೇಳಿಕೊಂಡಿದ್ದಾಳೆ. ನೀಲಾಂಬಿಕೆಯು ಬಸವಣ್ಣನವರ ವ್ಯಕ್ತಿತ್ವವನ್ನು ವರ್ಣಿಸಿದಷ್ಟು ಅರ್ಥಪೂರ್ಣವಾಗಿ ಯಾರೂ ವರ್ಣಿಸಿಲ್ಲ ಎಂದೆನಿಸುವುದು. ಬಸವಣ್ಣನವರ ಕುರಿತು ಬರೆದ ಒಂದೊಂದು ಸ್ವರವಚನ, ವಚನಗಳು ಬೃಹತ್ ಗ್ರಂಥದಲ್ಲಿ ನಿರೂಪಿಸುವಷ್ಟು ವಿಷಯ ಒಳಗೊಂಡಿವೆ. ನೀಲಾಂಬಿಕೆಯ ವಚನ:

**"ಬೆಳಗಿನ ಪ್ರಭೆ ಥಳಥಳಿಸಿ ಹೊಳೆಯಲು**
**ಆ ಬೆಳಗಿನೊಳಗೆ ಬೆಳೆದ ಶಿಶುವಾನಯ್ಯ**
**ಕಳೆಯ ಅರಿಯದೆ ಬೆಳೆದೆನು, ತಳುಹಿಲ್ಲದೆ ನಿಂದೆನು**
**ಸಂಗಯ್ಯನಲ್ಲಿ ಬಸವಾ ಬಸವಾ ಎನ್ನುತ್ತಿದ್ದನಯ್ಯಾ."**[7]

ನೀಲಾಂಬಿಕೆಗೆ ಬಸವಣ್ಣನವರ ಬಗೆಗೆ ಇದ್ದ ಭಕ್ತಿ, ಪ್ರೇಮ, ಆತ್ಮೀಯತೆ, ಅಭಿಮಾನ ದುಃಖ ಉಕ್ಕಿ ಹರಿದಿದೆ. ಬಸವನ ಬೆಳಗಿನಲ್ಲಿ ಬೆಳಗಿ ನೀಲಾಂಬಿಕೆಯ ಬದುಕು ಆಧ್ಯಾತ್ಮದ ತುತ್ತತುದಿಯನ್ನೇರಿ ನಿಂತ ನಿಲವನ್ನು ಈ ವಚನ ಹೇಳುವುದು. "ಬಸವಣ್ಣನ ಪ್ರಸಾದವಕೊಂಡು ಎನ್ನ ಕಾಯ ಶುದ್ಧವಾಯಿತಯ್ಯ ಎಂದು ಆಯ್ದಕ್ಕಿ

ಲಕ್ಕಮ್ಮ ತನ್ನ ವಚನದಲ್ಲಿ ಹೇಳಿದ್ದಾಳೆ.'' ''ಎನ್ನ ಭಾವಕ್ಕೆ ಗುರುವಾದನಯ್ಯಾ ಬಸವಣ್ಣನು ಎಂದು ಮುಕ್ತಾಯಕ್ಕ ಹೇಳಿಕೊಂಡಿದ್ದಾರೆ.'' ''ಕದಿರ ರೆಮ್ಮವ್ವೆ ಎನ್ನ ಸ್ಥೂಲ ತನುವೆ ಬಸವಣ್ಣನಯ್ಯಾ ಎಂದಿದ್ದಾಳೆ.''

ಬಸವಣ್ಣನವರ ಸಂಘ ಬಲದಿಂದ ಶರಣರಾದೆವು ಎಂದು ಧನ್ಯಭಾವವನ್ನು ಬಸವಣ್ಣನವರನ್ನು ಕುರಿತು ಸಮಸ್ತ ಶರಣರು ಸ್ಮರಿಸಿದ್ದಾರೆ. ಆಪ್ತ ಕಾರ್ಯದರ್ಶಿ ಹಡಪದ ಅಪ್ಪಣ್ಣ, ದಿವ್ಯಜ್ಞಾನಿ ಚೆನ್ನಬಸವಣ್ಣ, ಮಹಾಯೋಗಿ ಅಜಗಣ್ಣ, ಕರ್ಮಯೋಗಿ ಸಿದ್ಧರಾಮ, ಮಾದಾರ ಚೆನ್ನಯ್ಯ, ಡೊಹರ ಕಕ್ಕಯ್ಯ, ಮಡಿವಾಳ ಮಾಚಯ್ಯ, ನಿಷ್ಟುರತೆಗೆ ಇಂಬಿತ್ತ ಅಂಬಿಗರ ಚೌಡಯ್ಯ, ಜಂಗಮಕ್ಕೆ ಒಲಿದ ನುಲಿಯ ಚೆಂದಯ್ಯ, ಕಾಯಕ ಯೋಗಿ ಆಯ್ದಕ್ಕಿ ಮಾರಯ್ಯ, ಮರೆಮಿಂಡದೇ ವಯ್ಯ, ಬಿದಿರು ಕಾಯಕದ ಮೇದಾರ ಕೇತಯ್ಯ, ಗಜೇಶ ಮಸಣಯ್ಯ, ಸಮಗಾರ ಹರಳಯ್ಯ, ರಾಯರಸದ ಮಂಚಣ್ಣ, ತಿರುಗಾಹಿ ರಾಮಣ್ಣ, ಕನ್ನದ ಮಾರಯ್ಯ, ಹೊನ್ನ ಹೇಳಿಗೆಯ ಮೋಳಗೆಯ ಮಾರಯ್ಯ, ಅರಿವಿನ ತಿರುಳು ಮರಳು ಶಂಕರದೇವ, ಅನ್ಯವರಿಯದ ಕಿನ್ನರಿಬ್ರಹ್ಮಯ್ಯ, ಅಪರೂಪದ ವ್ಯಕ್ತಿ ಬಹುರೂಪಿ ಚೌಡಯ್ಯ, ಪಟ್ಟುಬಿಡದ ಗಟ್ಟಿವಾಳಯ್ಯ, ಒಕ್ಕಲಿಗರ ಮುದ್ದಣ್ಣ, ಕುರುಬ ಗೊಲ್ಲಾಳೇಶ್ವರ, ಸಂಗ್ರಾಮಸಾಹಸಿ ಗಂಗಾಂಬಿಕೆ, ಹಡಪದ ಲಿಂಗಮ್ಮ, ಮುಕ್ತಾಯಕ್ಕ, ಆಯ್ದಕ್ಕಿ ಲಕ್ಕಮ್ಮ, ಕಸಗೂಡಿಸುವ ಸತ್ಯಕ್ಕ, ಸೂಳೆ ಸಂಕವ್ವೆ, ಕೇತಲದೇವಿ, ಗುಡ್ಡವ್ವೆ, ಅಕ್ಕನಾಗಮ್ಮ, ನೀಲಾಂಬಿಕೆ, ಕಾಲಕಣ್ಣಿಯ ಕಾಮಮ್ಮ, ಕೊಟ್ಟಣದ ಸೋಮಮ್ಮ, ಕನ್ನಡಿ ಕಾಯಕದ ರೇವಮ್ಮ, ಕಾಳವ್ವೆ, ಅಕ್ಕಮ್ಮ, ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ, ಅಕ್ಕಮಹಾದೇವಿ, ಹೀಗೆ ಅಸಂಖ್ಯ ಶರಣರು ಬಸವಯುಗದಲ್ಲಿ ಯುಗಪುರುಷನ ಪರುಷ ಮಣಿಹದಲ್ಲಿ ಮಿಂಚಿದ ನಕ್ಷತ್ರಗಳು. ಅದಕ್ಕಾಗಿಯೇ ಸೊನ್ನಲಿಗೆಯ ಸಿದ್ಧರಾಮಯ್ಯ ಬಸವಣ್ಣನ ಕುರಿತು ಮತ್ತೆ ತಮ್ಮ ವಚನದಲ್ಲಿ:

**''ಬಸವಣ್ಣನೇ ತಾಯಿ ಬಸವಣ್ಣನೇ ತಂದೆ**
**ಬಸವಣ್ಣನೇ ಪರಮ ಬಂಧುವೆನಗೆ**
**ವಸುದೀಶ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ**
**ನಿಮ್ಮ ಹೆಸರಿಟ್ಟ ಗುರು ಬಸವಣ್ಣನಯ್ಯಾ''[8]**
**ಎಂದು ಸ್ಮರಿಸಿದರೆ, ಅಲ್ಲಮಪ್ರಭುದೇವರು ಈ ರೀತಿ:**
**'''ಬ' ಎಂಬಲ್ಲಿ ಎನ್ನ ಭವವು ಹರಿಯಿತ್ತು**
**'ಸ' ಎಂಬಲ್ಲಿ ಸರ್ವಜ್ಞಾನಿಯಾದೆನು.**
**'ವ' ಎಂದು ವಚಿಸುವರೆ ವಸ್ತು ಚೈತನ್ಯಾತ್ಮಕವಾದೆನು.**
**ಇಂತೀ ಬಸವಾಕ್ಷರ ಪ್ರಯವೆನ್ನ**
**ಸರ್ವಾಂಗದಲ್ಲಿ ತೊಳಗಿ ಬೆಳಗುವುದನ್ನು ಕಂಡು**
**ಆನು, ನೀನು, ಬಸವಾ ಬಸವಾ ಎನುತಿರ್ದೆವಯ್ಯಾ ಗುಹೇಶ್ವರಾ''[9]**

ಎಂದು ಅಲ್ಲಮಪ್ರಭುದೇವರು ಗುಹೇಶ್ವರ ಲಿಂಗದಲ್ಲಿ ಬಸವಣ್ಣನ ಮಹಿಮೆಯನ್ನು ಎತ್ತಿ ಕೊಂಡಾಡಿದ್ದಾರೆ.

ಬಸವಣ್ಣನವರ ಯೋಜನೆಯು ಎಷ್ಟು ದೊಡ್ಡ ಹರವನ್ನು ಒಳಗೊಂಡಿತ್ತು ಎನ್ನುವುದಕ್ಕೆ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಂಗಳ ದಾಸೋಹ ಮಹಾಮನೆಯಲ್ಲಿ ನಡೆಯುತ್ತಿತ್ತು ಎಂದರೆ ಬಸವಣ್ಣನವರ ಎದೆಗಾರಿಕೆ ಮೆಚ್ಚುವಂತಹದ್ದು. ಇಂದಿನ ಚುನಾಯಿತ ಕಾರ್ಪೋರೇಟರ್‌ಗಳಿಂದ ಹಿಡಿದು ಸಚಿವರು, ಮಂತ್ರಿಗಳು, ತಮ್ಮ ತಮ್ಮ ಮನೆಯ ಬೊಕ್ಕಸವನ್ನು ತುಂಬಿಕೊಂಡು ಮಾಡಬಾರದ ಅನಾಚಾರ ಮಾಡಿ ಎಫ್.ಐ.ಆರ್. ದಾಖಲಿಸಿಕೊಂಡು ಜೈಲಿನಲ್ಲಿ ಬಂಧಿಯಾಗಿ ಸಚಿವ ಸ್ಥಾನದಿಂದ ಉಚ್ಚಾಟಿಸಿಕೊಂಡು ನಿರ್ಗಮಿಸುವರು. ಕಾರ್ಪೋರೇಟರ್‌ಗಳಿಗೆ ಬರೀ ತನ್ನೂರಿನ ಒಂದೋಣಿಗೆ ಕುಡಿವ ನೀರಿನ ವ್ಯವಸ್ಥೆಯನ್ನೇ ಮಾಡಲು ಸಾಧ್ಯವಾಗದ ಹೊಣೆಗೇಡಿ ಜನಪ್ರತಿನಿಧಿಗಳು ಇಂದಿನ ರಾಜಕಾರಣಿಗಳು. ಆದ್ದರಿಂದ ವಿಶ್ವಜ್ಯೋತಿ ಬಸವಣ್ಣನವರು ಎಲ್ಲಾ ಕಾಲಕ್ಕೂ ಬೇಕಾಗಿದ್ದಾರೆ. "ಜನಮೆಚ್ಚಿ ನಡೆದರೇನಾದೀತು ಮನಮೆಚ್ಚಿ ನಡೆಯುವುದು ಲೇಸು."

ಮಹಾನುಭಾವ ಬಸವಣ್ಣನೆಂಬ ಕ್ರಾಂತಿಯ ಶಾಂತಿ ಸಾಗರವನ್ನು, ಅಷ್ಟ ದಿಕ್ಕುಗಳಿಂದ ಬಂದು ಸೇರಿದ ನದಿಗಳೆಂಬ ಶರಣರ ಒಂದೊಂದು ಮಹಾಕಾವ್ಯಗಳೇ ಆದರು. ಬಸವಣ್ಣನವರು ಕಲ್ಯಾಣವನ್ನು ತೊರೆದ ಅರಗಳಿಗೆಯಲ್ಲಿ ಕೆಟ್ಟಿತ್ತು ಕಲ್ಯಾಣ. ಬಿಜ್ಜಳ ರಾಜನ ಕೊಲೆ, ಶರಣರೆಲ್ಲಾ "ಬಸವಾ ಬಸವಾ" ಎನ್ನುತ್ತ ಕಲ್ಯಾಣ ಕ್ರಾಂತಿಯಲ್ಲಿ ಕರಗಿ ಹೋದರು. ತಮಗೆ ತೋರಿದ ದಾರಿಗಳಲ್ಲಿ ನಡೆದು ಬಸವಣ್ಣನವರ ಮುಡಿಗೆ ಹೂವ ತಂದು ಮುಡಿಸಿದರು. ಯಾವ ಶರಣನನ್ನು ನಾವು ಮಾತನಾಡಿಸಿದರೂ ಬಸವನಿಲ್ಲದೇ ಅವರ ವಚನಗಳು ಮಾತನಾಡಲಾರವು.

**ಕೊನೆ ಟಿಪ್ಪಣಿಗಳು:**


1. ಉಪಾಧ್ಯ ಜಿ.ಎನ್., (2011), ಕಾಯಕಯೋಗಿ ಸೊನ್ನಲಿಗೆಯ ಸಿದ್ಧರಾಮ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು, ಪು.ಸಂ. 84
2. ವೀರಣ್ಣ ರಾಜೂರ, (2013), ಬಯಲಬೆಳೆ ಸ್ಮರಣ ಸಂಚಿಕೆ, ಅಖಿಲ ಭಾರತ ಹನ್ನೊಂದನೆಯ ಶರಣ ಸಾಹಿತ್ಯ ಸಮ್ಮೇಳನ, ಧಾರವಾಡ, ಪು.ಸಂ. 66
3. ಅದೇ, ಪು.ಸಂ. 67
4. ಹಿರೇಮಠ ಆರ್.ಸಿ., (1990), ಶಿವದೀಪ್ತಿ, ಡಾ. ಶಿವಬಸವ ಸ್ವಾಮಿಗಳು ರುದ್ರಾಕ್ಷಿಮಠ ನಾಗನೂರು, ಬೆಳಗಾವಿ, ಪು.ಸಂ. 142
5. ಹಿರೇಮಠ ಆರ್.ಸಿ., (1996), ಮಹಾದೇವಿಯಕ್ಕನ ವಚನಗಳು, ಪ್ರಸಾರಾಂಗ, ಕರ್ನಾಟಕ

ವಿಶ್ವವಿದ್ಯಾಲಯ, ಧಾರವಾಡ, ಪು.ಸಂ. 86
6. ಹಿರೇಮಠ ಆರ್.ಸಿ., (1990), ಶಿವದೀಪ್ತಿ, ಡಾ. ಶಿವಬಸವ ಸ್ವಾಮಿಗಳು ರುದ್ರಾಕ್ಷಿಮಠ ನಾಗನೂರು, ಬೆಳಗಾವಿ, ಪು.ಸಂ. 142
7. ವೀರಣ್ಣ ರಾಜೂರ, (2013), ಸ್ವರವಚನ ನಿರ್ವಚನ, ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ, ಪು.ಸಂ. 39
8. ಜಗದ್ಗುರು ಮಾತೆ ಮಹಾದೇವಿ, (2012), ಶ್ರೀ ಬಸವೇಶ್ವರ ಪೂಜಾ ವ್ರತ, ವಿಶ್ವಕಲ್ಯಾಣ ಮಿಶನ್ ಬಸವ ಮಂಟಪ, ಬೆಂಗಳೂರು, ಪು.ಸಂ. 37
9. ಅದೇ, ಪು.ಸಂ. 12

## ಪರಾಮರ್ಶನ ಗ್ರಂಥಗಳು:


1. ಉಪಾಧ್ಯ ಜಿ.ಎನ್., (2011), ಕಾಯಕಯೋಗಿ ಸೊನ್ನಲಿಗೆಯ ಸಿದ್ಧರಾಮ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು.
2. ವೀರಣ್ಣ ರಾಜೂರ, (2013), ಬಯಲಬೆಳೆ ಸ್ಮರಣ ಸಂಚಿಕೆ, ಅಖಿಲ ಭಾರತ ಹನ್ನೊಂದನೆಯ ಶರಣ ಸಾಹಿತ್ಯ ಸಮ್ಮೇಳನ, ಧಾರವಾಡ.
3. ಹಿರೇಮಠ ಆರ್.ಸಿ., (1990), ಶಿವದೀಪ್ತಿ, ಡಾ. ಶಿವಬಸವ ಸ್ವಾಮಿಗಳು ರುದ್ರಾಕ್ಷಿಮಠ ನಾಗನೂರು, ಬೆಳಗಾವಿ.
4. ಹಿರೇಮಠ ಆರ್.ಸಿ., (1996), ಮಹಾದೇವಿಯಕ್ಕನ ವಚನಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5. ವೀರಣ್ಣ ರಾಜೂರ, (2013), ಸ್ವರವಚನ ನಿರ್ವಚನ, ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಶ್ವರ ಗ್ರಂಥಮಾಲೆ ಶ್ರೀ ಮುರುಘಾಮಠ, ಧಾರವಾಡ.
6. ಜಗದ್ಗುರು ಮಾತೆ ಮಹಾದೇವಿ, (2012), ಶ್ರೀ ಬಸವೇಶ್ವರ ಪೂಜಾ ವ್ರತ, ವಿಶ್ವಕಲ್ಯಾಣ ಮಿಶನ್ ಬಸವ ಮಂಟಪ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.